ಅಲ್ಲಿ police station ಮಂಜೂರು ಮಾಡಬೇಕು.

ಅಧ್ಯಕ್ಷರು: priventive ಮಾತ್ರ ತೆಗೆದುಕೊಳ್ಳಿ.

ಶ್ರೀ ಆರ್. ಅಶೋಕ್: ಅಪರಾಧ ಕಡಿಮೆಯಾದ ತಕ್ಷಣ police stations ಕಡಿಮೆಯಾಗುತ್ತವೆ. ಆದ್ದರಿಂದ ತಾವು ಹೇಳಿದ ವಿಷಯವನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವೀರಭದ್ರಪ್ಪ ಹಾಲಹರವಿ: Thank you.

13. ವಿಷಯ : ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ

ಶ್ರೀ ಹೆಚ್. ಹಾಲಪ್ಪ (ಸೊರಬ): ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಇರುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಹಾಗೂ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆ/ಕೇಂದ್ರಗಳಲ್ಲಿ ಮಂಜೂರಾದ, ಭರ್ತಿ ಮಾಡಿದ ಹಾಗೂ ಖಾಲಿ ಹುದ್ದೆಗಳ ವಿವರಗಳು ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಆಸ್ಪತ್ರೆ/ಕೇಂದ್ರ	ಮಂಜೂರಾದ ಹುದ್ದೆಗಳ ಸಂಖ್ಯೆ		ಭರ್ತಿ ಮಾಡಿ ಹುದ್ದೆಗಳ ಸಂಖ್ಯೆ		ಖಾಲಿ ಹುದ್ದೆಗಳ ಸಂಖ್ಯೆ	
		ವೈದ್ಯರು	ಸಿಬ್ಬಂದಿ	ವೈದ್ಯರು	ಸಿಬ್ಬಂದಿ	ವೈದ್ಯರು	ಸಿಬ್ಬಂದಿ
1.	ತಾಲ್ಲೂಕು ಆಸ್ಪತ್ರೆ ಸೊರಬ	06	45	05	16	01	29
2.	17 ಪ್ರಾಥಮಿಕ ಆರೋಗ್ಯ ಮಿತ ಕೇಂದ್ರಗಳು	17	172	11	86	06	86

ಸೊರಬ ತಾಲ್ಲೂಕು ಆಸ್ಪತ್ರೆಯು ಪ್ರಸ್ತುತ 50 ಹಾಸಿಗೆಗಳ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಆಸ್ಪತ್ರೆಯನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದ್ದು. ಅದಕ್ಕನುಗುಣವಾಗಿ ಕಟ್ಟಡ ನಿರ್ಮಾಣ ಮಾಡಬೇಕಿದೆ. ಪ್ರಸ್ತುತ ಈ ಆಸ್ಪತ್ರೆಗಳಲ್ಲಿ 5 ತಜ್ಞ ವೈದ್ಯರು ಅಂದರೆ, ಇಬ್ಬರು ಸ್ತ್ರೀರೋಗ ತಜ್ಞರು,

ತಲಾ ಒಬ್ಬರಂತೆ ಅರೆವಳಿಕೆ, ಕೀಲು, ಮೂಳೆ ತಜ್ಞತೆ ಹಾಗೂ ಕಿವಿ, ಮೂಗು, ಗಂಟಲು ತಜ್ಞತೆಯಲ್ಲಿ ಕಾರ್ಯನಿರ್ವಹಿತ್ತಿದ್ದಾರೆ. ಹಾಗೂ ಒಂದು ದಂತ ವೈದ್ಯಾಧಿಕಾರಿ ಹುದ್ದೆ ಖಾಲಿ ಇದೆ.

ಸೊರಬ ತಾಲ್ಲೂಕಿನ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ 6 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಈ ಎಲ್ಲಾ 6 ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ದಿನಾಂಕ: 27-6-2012 ರಂದು ಅನುಮತಿ ನೀಡಲಾಗಿದೆ.

ವಿವಿಧ ವೃಂದಗಳ ಇತರೆ ಖಾಲಿ ಹುದ್ದೆಗಳ ಪೈಕಿ, ಗ್ರೂಪ್-ಡಿ ವೃಂದಕ್ಕೆ ಸೇರಿದ ಹುದ್ದೆಗಳು ಕ್ರಮವಾಗಿ ಸೊರಬ ತಾಲ್ಲೂಕು ಆಸ್ಪತ್ರೆಯಲ್ಲಿ 10 ಹಾಗೂ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಆಗಿದೆ. ಹೊರ ಗುತ್ತಿಗೆ ಸೇವೆ ಪಡೆಯುವ ಮೂಲಕ ತಾಲ್ಲೂಕು ಆಸ್ಪತ್ರೆಯಲ್ಲಿ ಸ್ವಚ್ಚತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ವಿವಿಧ ಆಸ್ಪತ್ರೆಗಳು/ಕೇಂದ್ರಗಳಲ್ಲಿ ಖಾಲಿ ಇರುವ ಇತರೆ ಸಿಬ್ಬಂದಿಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.

1. ಪ್ರಸ್ತುತ 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹಾಗೂ 314 ಕಿರಿಯ ಆರೋಗ್ಯ ಪುರುಷ ಸಹಾಯಕರ ಹುದ್ದೆಗಳನ್ನು ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪ್ರಕ್ರಿಯೆಯು ಜಾರಿಯಲ್ಲಿದೆ.

2. ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಸ್ತುತ 224 ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗಿ, ಆಯ್ಕೆಯಾದ 224 ಅಭ್ಯರ್ಥಿಗಳ ಪೈಕಿ ಇತ್ತೀಚೆಗೆ 210 ಅಭರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

3. ಇಲಾಖೆಯಲ್ಲಿ ಒಟ್ಟು 13,965 ಗ್ರೂಪ್-ಡಿ ನೌಕರರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 4067 ಹುದ್ದೆಗಳು ಖಾಲಿಯಿವೆ. ಸದರಿ ಖಾಲಿ ಹುದ್ದೆಗಳ ಪೈಕಿ 2323 ಹುದ್ದೆಗಳನ್ನು ನೇರ ನೇವಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯು ಜಾರಿಯಲ್ಲಿದೆ.

ಶ್ರೀ ಹೆಚ್. ಹಾಲಪ್ಪ: ಉತ್ತರವನ್ನು ಕೊಟ್ಟಿದ್ದಾರೆ. ನಾನು ಡಾಕ್ಟರುಗಳ ಕೊರತೆ ಬಗ್ಗೆ ಕೇಳಿದ್ದೆ ಸ್ವಲ್ಪ ತಪ್ಪು ಮಾಹಿತಿ ಇದೆ. ಏಕೆ ಇದು ಈ ಹಂತದಲ್ಲಿ ಆಯಿತೋ ಗೊತ್ತಾಗಲಿಲ್ಲ. ಒಳ್ಳೆಯ ಅಧಿಕಾರಿಗಳು, ಒಳ್ಳೆಯ ಮಂತ್ರಿಗಳು ಬಂದಿದ್ದೀರಿ. 35+1 DHO ಒಟ್ಟು 36 ವೈದ್ಯರ ಕೊರತೆ ಇದೆ. ನನ್ನ ತಾಲ್ಲೂಕಿನಲ್ಲಿ 16 ಡಾಕ್ಟರುಗಳು ಮಾತ್ರ ಇದ್ದಾರೆ. 22 ಹುದ್ದೆ ಖಾಲಿ ಇವೆ ಎಂಬುದು ನನಗಿರುವ ಮಾಹಿತಿಯಾಗಿದೆ. ತಾವು ಬೇರೆ ಮಾಹಿತಿ ಕೊಟ್ಟಿದ್ದೀರಿ. ಅದರ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಡೆಂಗ್ಯು ಜ್ವರ ನಮ್ಮ ತಾಲ್ಲೂಕಿನಲ್ಲಿ ಕಾಣಿಸಿಕೊಂಡಿರುವ ಬಗ್ಗೆ ಹೇಳುತ್ತೇನೆ. ಡಾಕ್ಟರುಗಳ ಕೊರತೆ ಇರುವುದು ಒಂದು ವಿಷಯ. ಡೆಂಗ್ಯು ಜ್ವರ ಪತ್ತೆ ಹಚ್ಚುವಂಥ ಪರೀಕ್ಷಾ ಕೇಂದ್ರಗಳನ್ನು ತುರ್ತಾಗಿ ಸ್ಥಾಪಿಸಬೇಕು. ಮಾಮೂಲಿ ಪರೀಕ್ಷಾ ಕೇಂದ್ರಗಳಲ್ಲಿ ಡೆಂಗ್ಯು ಜ್ವರ ಗೊತ್ತಾಗುವುದಿಲ್ಲ. ಜಿಲ್ಲಾ ಕೇಂದ್ರಕ್ಕೆ ಕಳುಹಿಸಬೇಕು. ಅಥವಾ ಮಣಿಪಾಲಕ್ಕೆ ಕಳುಹಿಸಬೇಕು. ಬೆಂಗಳೂರಿಗೆ ಹೋಗಬೇಕೆಂದು ಕೇಳಿದ್ದೇನೆ. ಆದ್ದರಿಂದ ತುರ್ತಾಗಿ ಒಂದು ಟೀಂ ಅನ್ನು ಕಳುಹಿಸಲಿಕ್ಕೆ ಅಥವಾ ಒಂದು ಲ್ಯಾಬ್ ಅನ್ನು ತುರ್ತಾಗಿ ಮಾಡಲಿಕ್ಕೆ ಸಾಧ್ಯವಿದೆಯೇ? ಸಾಧ್ಯವಿದ್ದರೆ ಅದನ್ನು ಮಾಡಬೇಕು. ನಮ್ಮಲ್ಲಿನ ಒಂದು ಊರಿನಲ್ಲಿ ಡೆಂಗ್ಯು ಜ್ವರ 50ಕ್ಕಿಂತ ಹೆಚ್ಚು ಜನರಿಗೆ ಬಂದಿದೆ. 3 ಜನ ಮಕ್ಕಳು ತೀರಿ ಹೋಗಿದ್ದಾರೆ. ಅವರು ಸ್ಕೂಲಿಗೆ ಹೋಗಿ ಬದುಕಿ ಬಾಳಬೇಕಾದ ಮಕ್ಕಳು. ಕೂಡಲೇ ಆ ಡೆಂಗ್ಯು ಜ್ವರವನ್ನು ಕಂಡುಹಿಡಿಯುವಂಥ ರಕ್ತ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಬೇಕೆಂದು ನಾನು ಮನವಿ ಮಾಡುತ್ತೇನೆ. ತಾವು ಕೂಡ ಆದೇಶ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ :– ಮಾನ್ಯ ಅಧ್ಯಕ್ಷರೆ, ವೈದ್ಯರ ಕೊರತೆ ಇರುವ ಬಗ್ಗೆ ನಿನ್ನೆ, ಇವತ್ತು ಬೆಳಿಗ್ಗೆಯಿಂದ ಸಾಕಷ್ಟು ಚರ್ಚೆಯಾಗಿದೆ. ಕೊರತೆ ನೀಗಿಸುವ ದೃಷ್ಟಿಯಿಂದ specialist ಅನ್ನು ತುಂಬುವುದಕ್ಕೆ ಕಾನೂನು ಬರುತ್ತಿದೆ, ಅದು ಆದ ತಕ್ಷಣವೇ ಡಾಕ್ಟರ್ ಹುದ್ದೆ ತುಂಬುವ ಪ್ರಯತ್ನ ಮಾಡುತ್ತೇನೆ. ಅದೇ ರೀತಿ MBBS ವೈದ್ಯಾಧಿಕಾರಿಗಳ ದೃಷ್ಟಿಯಿಂದ ಅವರನ್ನು contract basis ಮೇಲೆ ತುಂಬಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅನುಮತಿ ಕೊಟ್ಟಿದ್ದೇವೆ. ಅಕಸ್ಮಾತ್ ಅದರಲ್ಲೇನಾದರೂ ದೊರೆತರೆ ನಿಶ್ಚಿತವಾಗಿ ಮಾನ್ಯ ಸದಸ್ಯರ ಸೊರಬ ತಾಲ್ಲೂಕು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇವೆ. ಅದನ್ನು ಹೊರತುಪಡಿಸಿ, 735 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರನ್ನು ಮತ್ತು 314 ಕಿರಿಯ ಪುರುಷ ಆರೋಗ್ಯ ಸಹಾಯಕರನ್ನು ಸರ್ಕಾರ

ನೇಮಕ ಮಾಡಿಕೊಳ್ಳುತ್ತಿದೆ. ಇದೆಲ್ಲಾ ಆದಾಗ ಅವರನ್ನು ಕಳುಹಿಸಿಕೊಡುವ ಕೆಲಸ ಮಾಡಲಾಗುತ್ತದೆ. ಮುಖ್ಯವಾಗಿ ಮಾನ್ಯ ಸದಸ್ಯರಾದಂಥ ಹಾಲಪ್ಪನವರು ಡೆಂಗ್ಯು ಜ್ವರದ ಬಗ್ಗೆ ಪ್ರಸ್ತಾಪಿಸಿದರು. ಅದರ ಬಗ್ಗೆ ಅವರ ತಾಲ್ಲೂಕಿನಲ್ಲಿ ವಿಶೇಷವಾದಂಥ ಪ್ರಕರಣಗಳು ಕಂಡು ಬರುತ್ತಿದೆ ಎಂದು ಹೇಳಿದರು. ನಿನ್ನೆಯೂ ಕೂಡ ಮಾಹಿತಿ ಕೇಳಿದ್ದರು. ಅವರ ತಾಲ್ಲೂಕಿನಲ್ಲಿ ಒಂದು ಡೆಂಗ್ಯು ಜ್ವರದ ಪ್ರಕರಣದಿಂದ ಸಾವಾಗಿದೆ. ಅಲ್ಲಿ ಒಂದು ವಿಶೇಷ Laboratory set up ಮಾಡುವ ಬಗ್ಗೆ ಅವರು ಕೇಳಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಸರ್ವೆ ಮಾಡಿದ್ದೇವೆ. ಅಂಥ ಪ್ರಕರಣ ಕಂಡು ಬಂದ ತಕ್ಷಣವೇ laboratory ಯನ್ನು ಅಲ್ಲಿ temporary ಯಾಗಿ set up ಮಾಡುವ ದೃಷ್ಟಿಯಿಂದ ಕ್ರಮ ಕೈಗೊಳ್ಳಲಾಗುತ್ತದೆ.

14. ವಿಷಯ : ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ್ ಕರೆಸಿಕೊಳ್ಳದಿರುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರುಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾತೃ ಇಲಾಖೆಗೆ ವಾಪಸ ಕರೆಸಿಕೊಳ್ಳದಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಹ ಶಿಕ್ಷಕರುಗಳನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜಿಸುವುದರಿಂದ ಶಾಲಾ ಕಾಲೇಜುಗಳಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉಂಟಾಗುವ ತೊಂದರೆಯನ್ನು ಗಮನಿಸಿ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 300 ಡಿಜಿಡಿ 2011 ದಿನಾಂಕ : 08–11–2011ರಲ್ಲಿ ಪದವಿ ಪೂರ್ವ ಕಾಲೇಜುಗಳ/ಪ್ರಾಥಮಿಕ/ಪ್ರೌಢ ಶಾಲೆಗಳ ಬೋಧಕರನ್ನು ಬೋಧಕೇತರ ಕಾರ್ಯಗಳಿಗೆ/ ಕಛೇರಿಗಳಿಗೆ ನಿಯೋಜನೆ ಮಾಡುವುದನ್ನು ನಿಷೇಧಿಸಲಾಗಿದೆ. ಆದಾಗ್ಯೂ ಕೆಲವು ಬೋಧಕ